**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**

ಸಾಕ್ಷಿಗೆ ದಿನಾಂಕಃ **28-11-2025 ರಂದು** ಪ್ರಮಾಣ ವಚನ ಬೋಧಿಸಲಾಯಿತು

C.C.No.1731/2015
CW- 4 PW-3

ಸಾಕ್ಷಿದಾರರ ಹೆಸರು - ಸಂಗಮೇಶ ವಾಯ ಕುರಿ

ವಯಸ್ಸು - 37 ವರ್ಷ

ಉದ್ಯೋಗ - ಎಚ್ ಸಿ

ಸಾಕೀನ - ರಾಮದುರ್ಗ

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

2015 ರಿಂದ 2022 ರವರೆಗೆ ಗೋಕಾಕ ಶಹರ ಪೊಲೀಸ್ ಠಾಣೆಯಲ್ಲಿ ಕರ್ತ್ಯವ್ಯ ನಿರ್ವಹಿಸಿರುತ್ತೇನೆ

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 04-09-2015 ರಂದು ನಾನು ಚಾಸಾ 1 ಹಾಗೂ 5 ರಿಂದ 7 ರವರು ಸೇರಿ ಸಂಜೆ 5 ಗಂಟೆಯ ಸಮಯದಲ್ಲಿ ನಮ್ಮ ಇಲಾಖಾ ವಾಹನ ಸಂಖ್ಯೆ ಕೆಎ-22/ಜಿ-304 ನೇದ್ದರಲ್ಲಿ ಎಲ್ಲರೂ ಕೂಡಿಕೊಂಡು ನಗರ ಗಸ್ತು ಕರ್ತವ್ಯದಲ್ಲಿದ್ದಾಗ, ಸಂಗೋಳ್ಳಿ ರಾಯಣ್ಣಾ ಸರ್ಕಲ್ ಹತ್ತಿರ ಸಾಯಂಕಾಲ 6-00 ಗಂಟೆ ಸಮಯದಲ್ಲಿ ಒಬ್ಬ ಬಾತ್ಮೀದಾರ ಬಂದು ಚಾಸಾ 1 ರವರಿಗೆ ಗವಳಿ ಗಲ್ಲಿಯ ಹತ್ತಿರ ಯಾರೋ ಅಪರಿಚಿತ ವ್ಯಕ್ತಿ ಅಕ್ರಮವಾಗಿ ಮದ್ಯವನ್ನು ಮಾರಾಟ

ಮಾಡುವ ಉದ್ದೇಶದಿಂದ ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ತಿಳಿಸಿದ್ದು ನಂತರ ಚಾಸಾ 1 ರವರು ಅಲ್ಲಿಯೇ ಇದ್ದ ಇಬ್ಬರು ವ್ಯಕ್ತಿಗಳನ್ನು ಪಂಚರನ್ನಾಗಿ ಬರಮಾಡಿಕೊಂಡು ದಾಳಿಗೆ ಸಹಕರಿಸಬೇಕೆಂದು ತಿಳಿಸಿ ಸದರಿ ವಾಹನದಲ್ಲಿ ಸ್ಥಳಕ್ಕೆ ಸುಮಾರು 6-20 ರ ಸಮಯಕ್ಕೆ ಹೋಗಿ ವಿಠ್ಠಲ ರುಕ್ಮೀಣಿ ದೇವಸ್ಥಾನ ಹತ್ತಿರ ನಿಂತು ವೀಕ್ಷಿಸಲಾಗಿ ಒಬ್ಬ ವ್ಯಕ್ತಿಯು ಪ್ಲಾಸ್ಟಿಕ್ ಬ್ಯಾಗಿನಲ್ಲಿ ಏನನ್ನೊ ತೆಗೆದುಕೊಂಡು ಹೋಗುತ್ತಿರುವುದನ್ನು ನೋಡಿದಾಗ, ಆ ವ್ಯಕ್ತಿ ಓಡಿ ಹೋಗುವ ಪ್ರಯತ್ನದಲ್ಲಿ ಇದ್ದಾಗ ಅವನನ್ನು ಬೆನ್ನಟ್ಟಿ ತಡೆಗಟ್ಟಿ ವಿಚಾರಿಸಲಾಗಿ ಅವನ ಹೆಸರು ಲಕ್ಕಪ್ಪಾ ಹಣಮಂತಪ್ಪಾ ಮುಡ್ಡೆಪ್ಪಗೋಳ, ಸಾಃ ಗವಳಿಗಲ್ಲಿ ಎಂದು ತಿಳಿದು ಬಂದಿದ್ದು, ಸದರಿ ಬ್ಯಾಗಿನಲ್ಲಿ ಇರುವುದನ್ನು ತಪಾಸಿಸಲಾಗಿ ಅದರಲ್ಲಿ ರಟ್ಟಿನ ಡಬ್ಬಿ ಇದ್ದು ಅದರಲ್ಲಿ ಕ್ರೌನ ಪೈನ ವಿಸ್ಕಿ 180 ಎಮ ಎಲ್ ನ 48 ಪೌಚಗಳಿದ್ದು ಅವುಗಳನ್ನು ಪಂಚರ ಸಮಕ್ಷಮ ಜಪ್ತು ಮಾಡಿ, ಅವುಗಳಲ್ಲಿ ಒಂದು ಪೌಚನ್ನು ಮಾದರಿಗಾಗಿ ಪಡೆದು ನಂತರ ಸದರಿ ವ್ಯಕ್ತಿಯನ್ನು ಹಾಗೂ ಮಾಲುಗಳನ್ನು ಮತ್ತು ನಮ್ಮನ್ನು ಕರೆದುಕೊಂಡು ಠಾಣೆಗೆ ಬಂದು ದೂರನ್ನು ನೀಡಿ ಮುಂದಿನ ಕ್ರಮ ಕೈಗೊಂಡಿರುತ್ತಾರೆ. ಸದರಿ ಪಂಚನಾಮೆ ಬರೆದಾಗ ಸಮಯ 6-45 ರಿಂದ 7-45 ಗಂಟೆ ಆಗಿತ್ತು. ಈ ಕುರಿತು ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

## ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ಸದರಿ ದಿನ ನಮ್ಮ ಕರ್ತವ್ಯದ ಅವಧಿ ಬೆಳಿಗ್ಗೆ 8-00 ಗಂಟೆಯಿಂದ ಮಧ್ಯಾಹ್ನ 2-00 ಗಂಟೆಯವರೆಗೆ ಮತ್ತು ಸಂಜೆ 4-00 ಗಂಟೆಯಿಂದ ರಾತ್ರಿ 8-30 ಗಂಟೆಯವರೆಗೆ ಇರುತ್ತದೆ. ಮಾಹಿತಿ ಬಂದಾಗ ನಾನು, ಚಾಸಾ 1, 5 ರಿಂದ 7 ರವರು

ಹಾಜರಿದ್ದೇವು. ಚಾಸಾ 2 ಮತ್ತು 3 ರವರು ಗೋಕಾಕ ವಾಸಿಗಳಾಗಿದ್ದು ಅವರ ಸಂಪೂರ್ಣ ವಿವರ ನನಗೆ ನೆನಪಿಲ್ಲ. ಚಾಸಾ 2 ಮತ್ತು 3 ರವರು ಸಂಗೋಳ್ಳಿ ರಾಯಣ್ಣಾ ಸರ್ಕಲದಲ್ಲಿಯೇ ಇದ್ದರು. ಗವಳಿ ಗಲ್ಲಿಯು ಜನಸಂದಣಿ ಇರುವ ಪ್ರದೇಶವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದೇವಸ್ಥಾನದ ಹತ್ತಿರ ಸಾಕಷ್ಟು ಜನ ಓಡಾಡುತ್ತಿರುತ್ತಾರೆ ಎಂದರೆ ಇರಬಹುದು. ಆರೋಪಿಯು ಬಸ ನಿಲ್ದಾಣದಿಂದ ಗವಳಿ ಗಲ್ಲಿಯ ಹತ್ತಿರ ಹೋಗುತ್ತಿದ್ದನು.  ನಾವು ಬಾತ್ಮೀದಾರರು ನೀಡಿದ್ದ ಮಾಹಿತಿ ಆಧಾರದ ಮೇಲೆ ಆರೋಪಿಯ ಚಹರೆಯನ್ನು ಗುರುತಿಸಿರುತ್ತೇವೆ. ಸದರಿ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ನಮಗೆ ಯಾವುದೇ ಮಾಹಿತಿ ಬಂದಿರುವುದಿಲ್ಲ ಮತ್ತು ನಾವು ದಾಳಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾವು ಪಂಚನಾಮೆಯನ್ನು ಯಾವುದೇ ಸ್ಥಳದಲ್ಲಿ ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ಠಾಣೆಯ ಪ್ರಕರಣಗಳ ಅಂಕಿ ಅಂಶಗಳಿಗೋಸ್ಕರ ದಾಖಲಿಸಲಾದ ಸುಳ್ಳು ಪ್ರಕರಣದಲ್ಲಿ ನಾನು ಸುಳ್ಳು ಹೇಳಿಕೆ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.& ನ್ಯಾದಂ., ಗೋಕಾಕ.